ದಿಃ **23.02.2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಡಿ.ಎಸ್ ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿ ಇದ್ದು ನನ್ನ ಮುಖ್ಯ ಸಾಕ್ಷ್ಯವನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ನಿಜವಿದ್ದು ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ದಿಃ **03.05.1920** ರ ಅನಂತಯ್ಯ ಸಾಮಗರು ಶೀನಪ್ಪ ಹೆಗ್ಡೆಯವರಿಗೆ ನೀಡಿದ ಸೇಲ್ ಡೀಡಿನ ಮೂಲಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**1** ಎಂದು ಗುರುತಿಸಲಾಯಿತು.

ದಿಃ **20.05.1920** ರ ದೇವಪ್ಪ ಸಾಮಗ ಅವರು ಶೀನಪ್ಪ ಹೆಗ್ಡೆಯವರಿಗೆ ನೀಡಿದ ಸೇಲ್ ಡೀಡಿನ ಮೂಲಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**2** ಎಂದು ಗುರುತಿಸಲಾಯಿತು.

ದಿಃ **21.02.1922** ರ ಸೇಲ್ ಡೀಡಿನ ನಾರಾಯಣ ಸಾವಂತರು ತನಿಯ ಶೆಟ್ಟಿಗಾರ್ ಅವರಿಗೆ ನೀಡಿದ ರಿಜಿಸ್ಟರ್ ಸೇಲ್ ಡೀಡಿನ ಮೂಲಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**3** ಎಂದು ಗುರುತಿಸಲಾಯಿತು.

ದಿಃ **10.05.1922** ರ ನಾರಾಯಣ ಸಾವಂತರು ತಮ್ಮಣ್ಣ ಶೆಟ್ಟಿಯವರಿಗೆ ನೀಡಿದ ರಿಜಿಸ್ಟರ್ ಡೀಡ್ ಆಫ್ ಟ್ರಾನ್ಸ್ ಫರ್ ನ ಮೂಲಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**4** ಎಂದು ಗುರುತಿಸಲಾಯಿತು.

ದಿಃ **18.08.1926** ಶೀನಪ್ಪ ಹೆಗ್ಡೆಯವರು ತನಿಯ ಶೆಟ್ಟಿಯವರಿಗೆ ನೀಡಿದ ರಿಜಿಸ್ಟರ್ ಸೇಲ್ ಡೀಡಿನ ಮೂಲಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**5** ಎಂದು ಗುರುತಿಸಲಾಯಿತು.

ದಿಃ **05.09.1928** ರ ತನಿಯ ಶೆಟ್ಟಿಗಾರ್ ನಕ್ರ ಶೆಟ್ಟಿಗಾರರ ಪರವಾಗಿ ಮಾಡಿದ ಮೂಲ ಮಾರ್ಟ್ ಗೇಜ್ ಡೀಡ್ ನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**6** ಎಂದು ಗುರುತಿಸಲಾಯಿತು.

ದಿಃ **25.10.1928** ರ ತಮ್ಮಣ್ಣ ಶೆಟ್ಟಿಗಾರ್ ಅವರು ಗಿರಿಯಮ್ಮ ಶೆಟ್ಟಿಗಾರ್ತಿಗೆ ಮಾಡಿದ ರಿಜಿಸ್ಟರ್ ಡೀಡ್ ಆಫ್ ಟ್ರಾನ್ಸ್ ಫರ್ ಡೀಡನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ**-7** ಎಂದು ಗುರುತಿಸಲಾಯಿತು.

ದಿಃ **12.11.1943** ರ ನಕ್ರ ಶೆಟ್ಟಿಗಾರ್ ಅವರು ತನಿಯ ಶೆಟ್ಟಿಗಾರ್ ಅವರಿಗೆ ಬರೆದುಕೊಟ್ಟ ರಿಜಿಸ್ಟರ್ಸ್ ರಶೀದಿ ಹಾಜರುಪಡಿಸಿದ್ದು ಅದನ್ನು ನಿ.ಪಿ**-8** ಎಂದು ಗುರುತಿಸಲಾಯಿತು.

ದಿಃ **29.02.1972** ರ ಸಂಜೀವ ಶೆಟ್ಟಿಗಾರ್ ಮತ್ತು ಹಿರಿಯಣ್ಣ ಶೆಟ್ಟಿಗಾರ್ ನಡುವೆ ಆದ ರಿಜಿಸ್ಟರ್ಡ್ ಎಕ್ಸ್ಚೇಂಜ್ ಡೀಡಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ**-9** ಎಂದು ಗುರುತಿಸಲಾಯಿತು.

ದಾವಾ ಆಸ್ತಿಗೆ ಸಂಬಂದಪಟ್ಟ ಕಚ್ಚಾ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ**-10** ಎಂದು ಗುರುತಿಸಲಾಯಿತು.

ಸರ್ವೆ ನಂಬ್ರ **164/2** ಎ ಮತ್ತು ಸರ್ವೆ ನಂಬ್ರ **164/2** ಬಿ ದಾವಾ ಆಸ್ತಿಗೆ ಸಂಬಂದಪಟ್ಟ **2** ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ**-11** ಮತ್ತು **12** ಎಂದು ಗುರುತಿಸಲಾಯಿತು.

ದಿಃ **14.04.2021** ರ ವಾದಿ **1** ರಿಂದ **3** ರವರು ಸ್ಪೆಷಲ್ ಎಲ್ ಎ ಓ ರವರಿಗೆ ಬರೆದ ಪತ್ರದ ಕಚೇರಿ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ**-13** ಎಂದು ಗುರುತಿಸಲಾಯಿತು.

ದಿಃ **16.04.2021** ರಲ್ಲಿ ವಾದಿಗಳು ಡೆಪ್ಯುಟಿ ಕಮಿಷನರ್, ಉಡುಪಿ ಇವರಿಗೆ ನೀಡಿದ ಅರ್ಜಿಗೆ ಸದ್ರಿ ಕಚೇರಿಯವರ ಸೀಲು ಸಹಿ ಇರುವ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ**-14** ಎಂದು ಗುರುತಿಸಲಾಯಿತು.

ದಿಃ **11.01.2013** ರ ಭೂಸ್ವಾಧೀನಾಧಿಕಾರಿ, ಕುಂದಾಪುರ ಯವರು **3** ನೇ ವಾದಿಯವರಿಗೆ ಕಳುಹಿಸಿದ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ**-15** ಎಂದು ಗುರುತಿಸಲಾಯಿತು.

ದಿಃ **13.01.2020** ರಂದು ವಾದಿಗಳು ಅಸಿಸ್ಟೆಂಟ್ ಕಮಿಷನರ್ ಕುಂದಾಪುರ ಇವರಿಗೆ ಬರೆದ ಪತ್ರದ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ**-16** ಎಂದು ಗುರುತಿಸಲಾಯಿತು.

ದಿಃ **22.11.2019** ರಂದು ವಾದಿಗಳು ಎಲ್ ಎ ಓ ಬೆಂಗಳೂರು ಇವರಿಗೆ ಬರೆದ ಪತ್ರದ ಸ್ವೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ**-17** ಎಂದು ಗುರುತಿಸಲಾಯಿತು.

ಹೆರ್ಗ ಗ್ರಾಮ ಪಂಚಾಯತಿಯಿಂದ ಕಟ್ಟಡ ಕಟ್ಟಿಸುವುದರ ಬಗ್ಗೆ ನೀಡಿದ ಪರ್ಮಿಟನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ**-18** ಎಂದು ಗುರುತಿಸಲಾಯಿತು.

ದಿಃ **23.10.2020** ರಂದು ವಾದಿಗಳು ತೆರಿಗೆ ಪಾವತಿ ಮಾಡಿದ ಬಗ್ಗೆ ರಶೀದಿ ಮತ್ತು ಚಲನ್ ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ**-19** ಮತ್ತು **20** ಎಂದು ಗುರುತಿಸಲಾಯಿತು.

ಹಿರಿಯಣ್ಣ ಶೆಟ್ಟಿಗಾರ್ ಅವರಿಗೆ ಸೇರಿದ ಮೂಲ ಕುಟುಂಬ ಪಡಿತರ ಚೀಟಿ ಹಾಜರುಪಡಿಸಿದ್ದು ಅದನ್ನು ನಿ.ಪಿ**-21** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಅನುಮತಿಸಿದೆ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ